# ಪುಟಾಣಿ ಪ್ರಾಸಗಳು




■ ರಾಜಶೇಖರ ಕುಕ್ಕುಂದಾ,
ಬಾಗಲಕೋಟೆ

ಚಿತ್ರಗಳು: ಮಂಜುನಾಥ ಹುಲುಕೊಪ್ಪ

1
ದೊಡ್ಡ ಹೊಟ್ಟೆ ದೊಡ್ಡಣ್ಣ
ಸಣ್ಣ ಹೊಟ್ಟೆ ಸಣ್ಣಣ್ಣ
ಇಬ್ರೂ ಕದ್ದು ತಂದದ್ದೇನು?
ಶೆಟ್ರ ಮನೆ ತಂಗ್ಭನ್ನ!

2

ಜಾರುಬಂಡಿ ಜುರುಕ್
ಜಾರುಬಂಡಿ ಜುರುಕ್
ಜರ್‍ರಂತ ಜಾರುವಾಗ
ಪುರುಕ್ ಪುರುಕ್ ಪುರುಕ್!



3

ಕುರೀ ಕುರೀ ಕುರಿ
ದೊಡ್ಡೀ ತುಂಬಾ ಕುರಿ
ಕೋಚೀಂಗಂತ ಬಂದೇಬಿಟ್ಟು
ಕೋಟಾದೊಂದು ನರಿ!

4
ಮೂಗಿಲ್ದ ತೊಂಡಿಕಾಯಿ
ಬಾಯಿಲ್ದ ಬೆಂಡಿಕಾಯಿ
ಮೂಸಿ ನೋಡ್ಲಿಕ್ ಬಂದಿತ್ತೊಂದು
ಬಾಲ ಇಲ್ಲದ್ ನಾಯಿ!



5
ಬೆಕ್ಕಿನ್ಮರಿ ಬಂತು
ಇಲಿಮರಿ ತಿಂತು
ದೇವರ ಮನೆ ಜಗಲಿ ಮೇಲೆ
ಕಣ್ಣುಮ್ಚಿ ಕುಂತು!



6
ಅಜ್ಜನ್ತಲೆ ಬೋಳು
ಅಜ್ಜಿಗಾಯ್ತು ಗೋಳು
ವಿಗ್ ಹಾಕ್ಕೊಂಡ್ ತಲಿ ಅಂತು
ಸುಮ್ನೆ ದುಡ್ಡು ಹಾಳು ■